**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.798/2019**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶ್ರೀನಿವಾಸ** | | |
| **ತಂದೆಯ ಹೆಸರು** | **ವೆಂಕಟರಾಮಪ್ಪ** | **ಪಿಡಬ್ಲೂ:** | **4** |
| **ವಯಸ್ಸು** | **34 ವರ್ಷ** | **ಸಿಡಬ್ಲೂ:** | **5** |
| **ಉದ್ಯೋಗ:** | **ಪೋಲೀಸ್ ಪೇದೆ** | | |
| **ವಾಸ ಸ್ಥಳ:** | **ಕೆಂಚಾರ್ಲಹಳ್ಳಿ ಠಾಣೆ** | | |

**ದಿನಾಂಕ 14-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::-**

ದಿ: 04-08-2016 ರಿಂದ 04-08-2021 ರವರೆಗೆ ಕೆಂಚಾರ್ಲಹಳ್ಳಿ ಠಾಣೆಯಲ್ಲಿ ಪೋಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 15-05-2019 ರಂದು ಚಿ.ಗ್ರಾ. ವೃತ್ತ ಇನ್ಸ್ ಪೆಕ್ಟರ್ ಆದ ಚಾಸಾ 1 ರವರಿಗೆ ಗುಡಿಸಲಹಳ್ಳಿ ಗ್ರಾಮದ ವೆಂಕಟರವಣಪ್ಪ ರವರ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದ ಬಗ್ಗೆ ಬಂದ ಖಚಿತ ಮಾಹಿತಿಯ ಮೇರೆಗೆ ಚಾಸಾ 1 ರವರು ತಮ್ಮ ಸಿಬ್ಬಂದಿಯಾದ ಚಾಸಾ 3 ಮತ್ತು ಚಾಸಾ 4 ರವರೊಂದಿಗೆ ಗುಡಿಸಲಹಳ್ಳಿ ಗ್ರಾಮದ ಬಳಿ ಬಂದು, ಅಲ್ಲಿಗೆ ಚಾಸಾ 2 ಮತ್ತು ನನ್ನನ್ನು ಬರಮಾಡಿಕೊಂಡು ಹಾಗೂ ಪಂಚರಾದ ಚಾಸಾ 6 ಮತ್ತು ಚಾಸಾ 7 ರವರನ್ನು ಬರಮಾಡಿಕೊಂಡು ಮಾಹಿತಿಯನ್ನು ತಿಳಿಸಿ ಅವರನ್ನು ಪಂಚರಾಗಿ ಸಹಕರಿಸಲು ಕೋರಿರುತ್ತಾರೆ. ನಂತರ ಪಂಚರು ಅದನ್ನು ಒಪ್ಪಿಕೊಂಡು ಸಹಕರಿಸಿ ಆರೋಪಿತನ

ಚಿಲ್ಲರೆ ಅಂಗಡಿಯ ಮೇಲೆ ದಾಳಿ ಮಾಡಿದ್ದು, ಅಂಗಡಿಯ ಒಳಗಡೆ ಬಿಳಿ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಸದರಿ ಚೀಲದಲ್ಲಿ 180 ಎಂ ಎಲ್ ನ ಬ್ಯಾಗ್ ಪೈಪರ್ ವಿಸ್ಕಿಯ 2 ಪ್ಯಾಕೇಟುಗಳು, 180 ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ 2 ಬಾಟಲುಗಳು , ನಾಕೌಟ್ ಸ್ಟ್ರಾಂಗ್ ನ 2 ಬಾಟಲುಗಳು ಮತ್ತು 650 ಎಂ ಎಲ್ ನ ಕಿಂಗ್ ಫಿಶರ್ ನ 2 ಬಾಟಲುಗಳು ಇದ್ದವು. ನಂತರ ಆರೋಪಿಯ ದಸ್ತಗಿರಿ ಕ್ರಮ ಅನುಸರಿಸಿ ಆತನಿಗೆ ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆತ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ಆರೋಪಿಯನ್ನು ವಶಕ್ಕೆ ಪಡೆದು, ವಶಪಡಿಸಿಕೊಂಡಿದ್ದ ಮಾಲುಗಳ ಪೈಕಿ ತಲಾ ಒಂದೊಂದು ಮದ್ಯದ ಪ್ಯಾಕೇಟ್ ಮತ್ತು ಬಾಟಲ್ ನ್ನು ಎಫ್ ಎಸ್ ಎಲ್ ಗೆ ಕಳುಹಿಸಲು ಬಿಳಿ ಚೀಲದಲ್ಲಿ ಹಾಕಿ ಹೊಲಿದು, ವಿ ಹೆಚ್ ಎಂದು ಮೊಹರನ್ನು ಹಾಕಿ, ನಂತರ ಆರೋಪಿ ಮತ್ತು ಮಾಲುಗಳನ್ನು ವಶಪಡಿಸಿಕೊಂಡಿರುತ್ತೇವೆ. ಸದರಿ ಪಂಚನಾಮೆಯನ್ನು 6.30 ರಿಂದ 7.15 ರವರೆಗೆ ಮಾಡಿದ್ದರು. ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು.

**<u>ಪಾಟೀಸವಾಲು: ಶ್ರೀ. ಜಿ.ಬಿ.ವಿ. ಆರೋಪಿ ಪರ ವಕೀಲರಿಂದ:-</u>**

6.10 ಕ್ಕೆ ನನಗೆ ಚಾಸಾ 1 ರವರು ವಿಷಯ ತಿಳಿಸಿದ್ದರು, ಆ ಕಾಲಕ್ಕೆ ನಾನು ಠಾಣೆಯಲ್ಲಿ ಇದ್ದೆ. ನಾವೆಲ್ಲರೂ ಗ್ರಾಮದ ಬಸ್ ಸ್ಟ್ಯಾಂಡ್ ನ ಬಳಿ ಸೇರಿದ್ದೇವು. ನಾವೆಲ್ಲರೂ ಪೋಲೀಸರು ಬಂದ ಮೇಲೆ ಪಂಚರನ್ನು ಕರೆಯಿಸಿಕೊಂಡಿದ್ದೇವು. ಪಂಚರನ್ನು ಚಾಸಾ 1 ರವರು ಕರೆಯಿಸಿದ್ದರು. ಪಂಚರು ಬಸ್ ಸ್ಟ್ಯಾಂಡ್ ನಲ್ಲಿ ನಾವು ಹೋಗುವಷ್ಟರಲ್ಲಿ ಇದ್ದರು. ಆ ಅಂಗಡಿಗೆ ಕಟ್ಟಿಗೆಯ ಬಾಗಿಲು

ಇತ್ತು. ಸದರಿ ವಿಷಯವನ್ನು ಪಂಚನಾಮೆಯಲ್ಲಿ ಹೇಳಿಲ್ಲ. ಬಾಗಿಲು ಯಾವ ದಿಕ್ಕಿಗೆ ಇತ್ತು ಎಂಬುದು ನನಗೆ ಗೊತ್ತಿಲ್ಲ. ಅದು ಪ್ರತ್ಯೇಕವಾದ ಅಂಗಡಿ ಆಗಿತ್ತು.

ನಾವೆಲ್ಲರೂ ಒಟ್ಟಿಗೆ ಅಂಗಡಿಯ ಒಳಗೆ ಹೋಗಿದ್ದೇವು. ಮೊದಲು ಅಂಗಡಿಯ ಒಳಗೆ ಚಾಸಾ 1 ರವರು ಹೋಗಿದ್ದರು. ಮಹಜರ್ ನಲ್ಲಿ ಅಂಗಡಿಯ ಅಳತೆ ಬರೆದಿಲ್ಲ ಎಂದರೆ ಸರಿ. ಆ ಅಂಗಡಿಯಲ್ಲಿ ಮಕ್ಕಳು ತಿನ್ನುವ ಚಾಕಲೇಟ್ ಮತ್ತು ಇನ್ನಿತರೆ ತಿಂಡಿಗಳು ಇದ್ದವು. ಆ ಅಂಗಡಿಯಲ್ಲಿ ಎಲೆಕ್ಟ್ರಾನಿಕ್ ಸಾಮಾನುಗಳು ಇರಲಿಲ್ಲ. ಅಲ್ಲಿ ಚೇರು ಮತ್ತು ಟೇಬಲ್ ಗಳು ಇದ್ದವು ಅದನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಅವುಗಳು ಕಟ್ಟಿಗೆಯ ಸಾಮ್ರಾಗ್ರಿಗಳು. ಅಲ್ಲಿ ಕಬ್ಬಿಣದ ಒಂದು ಚೇರು ಮತ್ತು ಕಟ್ಟಿಗೆಯ ಒಂದು ಚೇರು ಇದ್ದವು.

ನಿಪಿ 1 ನ್ನು ನಮ್ಮ ಪೋಲೀಸರೆ ಬರೆದಿರುತ್ತಾರೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ.

ಅದೇ ದಿನ ನಾವು ರಾಮಾಂಜಿನಪ್ಪ ಎಂಬುವರ ಅಂಗಡಿಯ ಮೇಲೆ ದಾಳಿ ಮಾಡಿದ್ದೇವು. ಎಲ್ಲವನ್ನು ಮುಗಿಸುವಷ್ಟರಲ್ಲಿ ಸಂಜೆ 7.15 ಆಗಿತ್ತು. ಇದಾದ ಮೇಲೆ ನಿಮಗೆ ಅವರ ಅಂಗಡಿಯ ಬಗ್ಗೆ ಮಾಹಿತಿ ಬಂದಿತ್ತಾ ಎಂದರೆ ಸಾಕ್ಷಿಯು ಮೊದಲು ರಾಮಾಂಜಿನಪ್ಪ ರವರ ಅಂಗಡಿಯ ಮೇಲೆ ದಾಳಿ ಮಾಡಿದ್ದೇವು ಎನ್ನುತ್ತಾರೆ. ಅವರ ಅಂಗಡಿ ದಾಳಿ ಮಾಡಿದ ಸಮಯ ನನಗೆ ಗೊತ್ತಿಲ್ಲ. ಅವರ ಅಂಗಡಿಯಲ್ಲಿ ದಾಳಿ ಮಾಡಲು ಇದೇ ಕೋನಪ್ಪ ಮತ್ತು ಚಂದ್ರ ಎಂಬ ಪಂಚರನ್ನು ಕರೆದುಕೊಂಡು ಹೋಗಿದ್ದೇವು.

ಎಷ್ಟು ಮದ್ಯ ಇದ್ದರೆ ನೀವು ಪ್ರಕರಣ ಹೂಡಿರುತ್ತೀರಿ ಎಂದರೆ ಸಾಕ್ಷಿಯು ಅದು ನನಗೆ ಐಡಿಯಾ ಇಲ್ಲ, ಚಾಸಾ 1 ರವರನ್ನು ಕೇಳಬೇಕು ಎನ್ನುತ್ತಾರೆ.

ಆ ದಿನ ನಾವು ಆರೋಪಿಯ ಅಂಗಡಿಯ ಮೇಲೆ ದಾಳಿ ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯದ್ದು ಯಾವುದೇ ಅಂಗಡಿ ಇಲ್ಲ ಎಂದರೆ ಸರಿಯಲ್ಲ. ಆ ದಿನ ಪಂಚರು ಬಂದಿರಲಿಲ್ಲ ಎಲ್ಲವನೂ ಠಾಣೆಯಲ್ಲಿ ಬನಾವಟೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆ ಮಾಲು ಈ ದಿನ ನ್ಯಾಯಾಲಯದ ಮುಂದೆ ಇಲ್ಲ.ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.